2) ಲಾಡವಂತಿ ಗ್ರಾಮದಲ್ಲಿ ಜಿಲ್ಲಾ ಪರಿಷತ್ ಮಂಜೂರು ಮಾಡಿದ ಖಾಸಗಿ ಪ್ರೌಢಶಾಲೆ ನಡೆಯುತ್ತಿರುವುದರಿಂದ ಸದರಿ ಸ್ಥಳದಲ್ಲಿ ಸರ್ಕಾರಿ ಪ್ರೌಢಶಾಲೆ ತೆರೆಯುವ ಅಗತ್ಯವಿಲ್ಲ. ಆದರೆ ಬಟ್ಟಿಗೇರಾ ಗ್ರಾಮಕ್ಕೆ ಸರ್ಕಾರಿ ಪ್ರೌಢಶಾಲೆ ಮಂಜೂರು ಮಾಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

3) ಬಂದಿದೆ

4) ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರಿಂದ ವರದಿ ಕೇಳಲಾಗಿದೆ. ವರದಿ ಬಂದ ನಂತರ ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

5) ಬಂದಿದೆ

6) ಸಧ್ಯಕ್ಕೆ ಒಂದು ಖಾಸಗೀ ಅನುದಾನಿತ ಸಂಯುಕ್ತ ಪದವಿ ಕಾಲೇಜು ಇರುವುದರಿಂದ ಇನ್ನೊಂದು ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಅವಶ್ಯಕತೆ ಸಧ್ಯಕ್ಕೆ ಇರುವುದಿಲ್ಲ.

ಕರ್ನಾಟಕ ರತ್ನ ಪ್ರಶಸ್ತಿ ಪಡೆದವರು

123 (748) ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವ ಕಲ್ಯಾಣ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರತ್ನ ಪ್ರಶಸ್ತಿಯನ್ನು ಪಡೆದವರ ಹೆಸರುಗಳು;

ಆ) ಈ ಮೇಲ್ಕಂಡ ಪ್ರಶಸ್ತಿಗೆ ವ್ಯಕ್ತಿಗಳನ್ನು ಆಯ್ಕೆ ಮಾಡಲು ಯಾವುದಾದರೂ ಸಮಿತಿಯನ್ನು ರಚಿಸಲಾಗಿದೆಯೇ;

ಇ) ಡಾ: ಎಂ.ಸಿ. ಮೋದಿ, ಶ್ರೀ ಎಸ್. ನಿಜಲಿಂಗಪ್ಪ ಮತ್ತು ದಿ. ಶ್ರೀಮತಿ ಜಯದೇವಿ ತಾಯಿ ಲಿಗಾಡೆ ಇವರುಗಳು ಸಲ್ಲಿಸಿದ ಅಸಾಧಾರಣ ಸೇವೆಗಾಗಿ ಇವರಿಗೆ ಕರ್ನಾಟಕ ರತ್ನ ಪ್ರಶಸ್ತಿ ನೀಡುವ ಬಗ್ಗೆ ಏನಾದರೂ ಪ್ರಸ್ತಾವನೆ ಇದೆಯೇ ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

ಅ) ಡಾ: ಕೆ.ವಿ. ಪುಟ್ಟಪ್ಪ (ಕುವೆಂಪು) ಮತ್ತು ಡಾ: ರಾಜಕುಮಾರ್

ಆ) ಇಲ್ಲ

ಇ) ಇಲ್ಲ

ಶಿಗ್ಗಾಂವ ಮತ್ತು ಸವಣೂರು ಪಟ್ಟದಲ್ಲಿ ಕೈಗಾರಿಕಾ ಎಸ್ಟೇಟ್ ಸ್ಥಾಪನೆ

124 (684) ಶ್ರೀ ಮಂಜುನಾಥ ಸಿ ಕುನ್ನೂರು (ಶಿಗ್ಗಾಂವ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿಗ್ಗಾಂವ ಮತ್ತು ಸವಣೂರು ಪಟ್ಟಣದಲ್ಲಿ ಕೈಗಾರಿಕಾ ಎಸ್ಟೇಟನ್ನು ಪ್ರಾರಂಭಿಸಲು ಎಷ್ಟು ಎಕರೆ ಜಮೀನು ಭೂ ಸ್ವಾಧೀನಪಡಿಸಿಕೊಳ್ಳಲಾಗಿದೆ;

ಆ) ಅದರಲ್ಲಿ ಎಷ್ಟು ಎಕರೆ ಜಮೀನುಗಳನ್ನು ಪ್ರತ್ಯಕ್ಷ ಕಬಜಾ ಪಡೆಯಲಾಗಿದೆ;